ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ :IRF/ಇತರೆ/2/2015-16

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆಂಪೇಗೌಡ ರಸ್ತೆ ,ಬೆಂಗಳೂರು-09
ದಿನಾಂಕ:21-01-2016.

## ಸುತ್ತೋಲೆ

ವಿಷಯ :- ಜಿಲ್ಲಾನೋಂದಣಾಧಿಕಾರಿಗಳು ಹಾಗೂ ಕೇಂದ್ರ ಸ್ಥಾನ ಸಹಾಯಕ ರವರುಗಳು ತಮ್ಮ ದೈನಂದಿನ ಕಾರ್ಯ ಕ್ರಮಗಳು ಹಾಗೂ ಪ್ರವಾಸದ ಮಾಹಿತಿ ಸಲ್ಲಿಸುವ ಕುರಿತು.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ನೋಂದಣಾಧಿಕಾರಿಗಳು ಕರ್ನಾಟಕ ನೋಂದಣಿ ನಿಯಮ 1965 ರ ನಿಯಮ 214 ರಲ್ಲಿ ಶೇಕಡ 50% ಹಾಗೂ ಕೇಂದ್ರ ಸ್ಥಾನ ಸಹಾಯಕ ರವರುಗಳು ಕರ್ನಾಟಕ ನೋಂದಣಿ ನಿಯಮ 1965 ರ ನಿಯಮ 217 ರಲ್ಲಿ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪ ನೋಂದಣಾಧಿಕಾರಿಗಳ ಕಛೇರಿಯನ್ನು ಪರಿವೀಕ್ಷಣೆ ನಡೆಸುವ ಮಾಹಿತಿ, ದೈನಂದಿನ ಕಾರ್ಯ ಕ್ರಮಗಳ ಮಾಹಿತಿ, ಸಭೆಗೆ ಹಾಜರಾಗುವ ಮತ್ತು ಪ್ರವಾಸ ಕಾರ್ಯಕ್ರಮದ ಹಾಗೂ ಇತರೆ ಮಾಹಿತಿಯನ್ನು ಕಡ್ಡಾಯವಾಗಿ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಈ ಕಛೇರಿಗೆ ತಪ್ಪದೆ ಸಲ್ಲಿಸಲು ಸೂಚಿಸಿದೆ.

ಜಿಲ್ಲಾ ನೋಂದಣಾಧಿಕಾರಿಗಳು/ಕೇಂದ್ರ ಸ್ಥಾನ ಸಹಾಯಕರು ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪ ನೋಂದಣಾಧಿಕಾರಿಗಳ ಕಛೇರಿಯನ್ನು ಪರಿವೀಕ್ಷಣೆ ಮಾಡುವಾಗ ಕಂದಾಯ ರಾಜಸ್ವ ಗುರಿಯನ್ನು ಗಮನದಲ್ಲಿಟ್ಟು ಸಂಬಂಧಪಟ್ಟ ಉಪ ನೋಂದಣಾಧಿಕಾರಿಗಳು ನೋಂದಣಿ ಮಾಡಿರುವ ದಸ್ತಾವೇಜುಗಳನ್ನು ಕಾನೂನಿನ ಅಡಿಯಲ್ಲಿ ಕ್ರಮಬದ್ಧವಾಗಿ ವರ್ಗೀಕರಣ(Classification) ವರ್ಗೀಕರಣ ಇರುವಂತಹ ಪ್ರಕರಣ, ತಪ್ಪಾಗಿ ವಿನಾಯಿತಿ/ರಿಯಾಯಿತಿ ನೀಡಿರುವ ಪ್ರಕರಣ, ಆಡಳಿತಾತ್ಮಕ ವಿಷಯ ಹಾಗೂ (Procedural Lapse) ಕ್ರಮಬದ್ಧ ರೀತಿಯ ತಪ್ಪುಗಳೊಂದಿಗೆ ನೋಂದಣಿ ಮಾಡಲ್ಪಟ್ಟ, ಆಸ್ತಿಯು ಅಪಮೌಲ್ಯವಾಗಿರುವಂತಹ ಪ್ರಕರಣಗಳನ್ನು ನಿಯಮನುಸಾರ ಪರಿಶೀಲಿಸಿ ಸರ್ಕಾರಕ್ಕೆ ರಾಜಸ್ವ ನಷ್ಟ ಉಂಟಾಗಿರುವ ಬಗ್ಗೆ ವರದಿ ಸಲ್ಲಿಸತಕ್ಕದ್ದು, ಹಾಗೂ ಪರಿವೀಕ್ಷಣೆಯಲ್ಲಿ ಕಂಡುಬಂದತಂಹ ನ್ಯೂನತೆಗಳನ್ನು ಸರಿಪಡಿಸಲು ಕೂಡಲೇ ಸೂಕ್ತ ಕಾನೂನಿನಡಿ ಅಂದರೆ ಕರ್ನಾಟಕ ಮುದ್ರಾಂಕ ಕಾಯ್ದೆ ಕಲಂ 45(1)ಮತ್ತು 46ಎ ನೋಂದಣಿ ಕಾಯ್ದೆ 1908 ಕಲಂ 80ಎ ರಡಿ ಪ್ರಕರಣವನ್ನು ದಾಖಲಿಸಿ, ನೋಂದಣಿ ಮಾಡಿರುವ ಉಪ ನೋಂದಣಾಧಿಕಾರಿ ಕರ್ತವ್ಯದಲ್ಲಿ ನಿರ್ಲಕ್ಷತೆ ಕಂಡುಬಂದಲ್ಲಿ ನಿಯಮ 170 ರಡಿ ಪ್ರಕರಣ ದಾಖಲಿಸಿಕೊಂಡು ಪ್ರಕರಣಗಳ ಪೂರ್ಣ ವಿವರಣೆಗಳನ್ನು Soft Copy ಮುಖಾಂತರ ಈ ಕಛೇರಿಗೆ ವರದಿ ಸಲ್ಲಿಸುವುದು. ಉಪ ನೋಂದಣಾಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಕರ್ತವ್ಯದಲ್ಲಿ ನಿರ್ಲಕ್ಷತೆ ಕಂಡುಬಂದಲ್ಲಿ ಕೂಡಲೇ ಅವರಿಗೆ ಪ್ರಾಥಮಿಕವಾಗಿ ತಮ್ಮ ಹಂತದ ಕಾರಣ ಕೇಳುವ ನೋಟೀಸ್ ಜಾರಿ

ಮಾಡಿ, ಹಾಗೂ ಸಂಬಂಧಪಟ್ಟವರಿಂದ ವಿವರಣೆ ಪಡೆದು ಅವಶ್ಯವಿದ್ದಲ್ಲಿ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ಕಂಡುಬಂದರೆ ನೋಂದಣಿ ಮಹಾಪರಿವೀಕ್ಷರು ಹಾಗೂ ಮುದ್ರಾಂಕಗಳ ಆಯುಕ್ತರವರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.

ರವರಿಗೆ:-

1) ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳು ಹಾಗೂ ಕೇಂದ್ರಸ್ಥಾನ ಸಹಾಯಕರವರುಗಳಿಗೆ ಮುಂದಿನ ಪಾಲನಾ ಕ್ರಮಕ್ಕಾಗಿ.
2) ಕಛೇರಿ ಕಡತಕ್ಕೆ.